**ಮಾದರಿ ಪ್ರಶ್ನೆಪತ್ರಿಕೆ**

**ವಿಷಯ – ಐಚ್ಛಿಕ ಕನ್ನಡ (16)**

**ಒಟ್ಟು ಪ್ರಶ್ನೆಗಳು – 57** | **ಪ್ರಥಮ ಪಿಯುಸಿ** | **ಒಟ್ಟು ಅಂಕಗಳು – 80**

**ಸಮಯ : 3:15 ನಿಮಿಷಗಳು**

---

**ಅ-ವಿಭಾಗ**

**I. ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬರೆಯಿರಿ.** **1x5 = 5**

1. ಸುರರ ಗುಣ ಇದು
   ಅ) ದ್ವೇಷ ಆ) ಸಂಪ್ರೀತಿ ಇ) ಭಕ್ತಿ ಈ) ಸ್ನೇಹ
2. ಕೆಲಸವನ್ನು ಹೀಗೆ ಮಾಡಬೇಕು
   ಅ) ಹಿರಿದು ಎನ್ನದೆ ಆ) ಕೆಟ್ಟದ್ದು ಎನ್ನದೆ ಇ) ಸ್ವಾರ್ಥ ಇಲ್ಲದೆ ಈ) ಕಿರಿದು ಎನ್ನದೆ
3. ಪ್ರಗತಿಯ ಅನ್ನ ಇದು
   ಅ) ದುಡಿಮೆ ಆ) ಉದ್ದಿಮೆ ಇ) ರಾಜಕಾರಣ ಈ) ಕೃಷಿ
4. ನೆಲೆನೆಕ್ಕಿ ಬದುಕಿದುದು ಇದು
   ಅ) ಗುದ್ದಲಿ ಆ) ನಾಯಿ ಇ) ಚಪ್ಪಲಿ ಈ) ಪೊರಕೆ
5. ಮಹಾಪೂರದಲ್ಲಿ ಕವಿ ಇದನ್ನು ನಡೆಸುತ್ತಾರೆ
   ಅ) ಕಾಗದದ ದೋಣಿ ಆ) ಮಣ್ಣಿನ ದೋಣಿ ಇ) ತೆಪ್ಪ ಈ) ಹಡಗು

**II. ಸರಿಯಾದ ಉತ್ತರವನ್ನು ಆಯ್ದು ಖಾಲಿಜಾಗ ಭರ್ತಿಮಾಡಿ** **1x5= 5**

6. ಕಾಯ ಪದದ ಅರ್ಥ ___________
7. ಸುವರ್ಣ ಪದದ ಸಮಾನಾರ್ಥ ಪದಗಳು ___________
8. ಕವಿ ಪದದ ನಾನಾರ್ಥ ಪದಗಳು ___________
9. ಪುಸಿ ಪದದ ತದ್ಭವ ರೂಪ ___________
10. ಸಭೆಯೊಳಗೆ ಪದದ ಬಿಡಿಸಿ ಬರೆದ ರೂಪ ___________

**(ಆವರಿಸು-ಕವಿತೆ ಬರೆಯುವವರು, ದೇಹ, ಹುಸಿ, ಸಭೆ+ಒಳಗೆ, ಚಿನ್ನ-ಬಂಗಾರ, ಕಸಿ.)**

**III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ** **1x5= 5**

11. ತುಟ್ಟಿ – ಹೊತ್ತಿಗೆ
12. ಅಜ – ದುಬಾರಿ
13. ಇಳೆ – ಬುದ್ಧಿವಾದ
14. ಪುಸ್ತಕ – ಮಳೆ
15. ಕಿವಿಮಾತು – ಆಡು
    – ಭೂಮಿ

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **1x 5= 5**

16. ಪಾರ್ವನು ಆಡನ್ನು ಹೇಗೆ ಕೊಂಡೊಯ್ಯುತ್ತಿದ್ದನು?
17. ಯಾರ ಮೈಮೇಲೆ ಹೆಚ್ಚಾಗಿ ದೆವ್ವ ಬರುತ್ತದೆ?
18. ವಡ್ಡಟ್ಟಿಯ ಗ್ರಾಮದೇವತೆ ಯಾರು?
19. ತಿರುಮಲಾಂಬ ಅವರ ಮೊದಲ ಪ್ರಕಟಿತ ಪ್ರಬಂಧ ಯಾವುದು?
20. ಲೇಖಕಿಯ ತವರಿನಲ್ಲಿ ದೋಸೆ ಮಾಡುತ್ತಿದ್ದವರು ಯಾರು?

## ಆ- ವಿಭಾಗ

**V. ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **2x4 = 8**

21. ನರರಲ್ಲಿ ಯಾವ ಯಾವ ಗುಣಗಳಿವೆ?
22. ಮನಸ್ಸಿನ ತೊಳಲಾಟಕ್ಕೆ ಕಾರಣವಾದ ಸಂಗತಿಗಳಾವುವು?
23. ಶಿಷ್ಯನಿಗೆ ಯಾವ ಗುಣಗಳನ್ನು ತ್ಯಜಿಸಲು ಗುರು ಹೇಳುತ್ತಾರೆ?
24. ಮಾವಿನ ಕಾಯಿಗಳಲ್ಲಿರುವ ಬೇಧ ಯಾವುದು?
25. ಗರಡಿಯ ಪ್ರಯೋಜನಗಳೇನು?
26. ಕ್ರೂರ ಮುದ್ರೆ ಎಲ್ಲೆಲ್ಲಿ ಕಾಣುತ್ತಿದೆ?

**VI. ಕೆಳಗಿನ ಮೂರು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **3x3 = 9**

27. 'ಜೀವ ಜ್ಞಾನದಿಂದ ಮುಕ್ತಿಯೋ?'
28. 'ತಂದೆ ತಾಯಿ ತಿರಿದು ತಿನಲು ಒಂದು ದಿನ ಕೇಳಲಿಲ್ಲ.'
29. 'ಹುಟ್ಟಲಿಲ್ಲವೆ ನಾನು ಮನೆಯಾಗೆ.'
30. 'ನಮ್ಮವರೆ ಹದಹಾಕಿ ತಿವಿದರದು ಹೂವೆ?'
31. 'ಹೊಸತು ಕಾವ್ಯವ ಬರೆಯಬೇಕಿದೆ ಬದುಕು ಬಣ್ಣವೇರಲಿಕೆ.'

**VII. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ** **4x2 = 8**

32. ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ... ವಚನದಹಿನ್ನೆಲೆಯಲ್ಲಿ ಪ್ರಸ್ತುತ ಕೌಟುಂಬಿಕ, ಸಾಮಾಜಿಕ, ರಾಜಕೀಯ ಸ್ಥಿತಿಗತಿಯನ್ನು ವಿವರಿಸಿ.
33. ಕನಕದಾಸರು ಅನಿತ್ಯವಾದ ಬದುಕನ್ನು ಹೇಗೆ ಸಾರ್ಥಕಪಡಿಸಿಕೊಳ್ಳಬೇಕು ಎನ್ನುತ್ತಾರೆ? ವಿವರಿಸಿ.
34. ಒಕ್ಕಲಿಗರು ಎದುರಿಸಿದ ಬರಗಾಲದ ಭೀಕರ ಪರಿಸ್ಥಿತಿಯನ್ನು ವಿವರಿಸಿ.
35. ಶ್ರಾವಣದ ಆಗಮನದಿಂದ ಇಳೆಯಲ್ಲಾದ ಬದಲಾವಣೆಗಳನ್ನು ಚಿತ್ರಿಸಿ.

**VIII. ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ** **4x1 = 4**

36. ತನು ಕರಗದವರಲ್ಲಿ
ಮಜ್ಜನವನೊಲ್ಲೆಯಯ್ಯಾ ನೀನು.
ಮನಕರಗದವರಲ್ಲಿ
ಪುಷ್ಪವನೊಲ್ಲೆಯಯ್ಯಾ ನೀನು.

37. ಕಿಟಕಿಯ ಜೊತೆಗೂ ಬರುವುದು
ಬೇಡಮ್ಮ, ಹೋಗು.
ಇಲ್ಲಿಂದಲೆ ಕೈಮುಗಿಯುವೆ-
ನಲ್ಲಿಂದಲೆ ಹರಸು.

## ಇ-ವಿಭಾಗ

**IX. ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **2x2 = 4**

38. ರೋಮ್ ನಲ್ಲಿ ನೋಡಲೇಬೇಕಾದ ಪ್ರಸಿದ್ಧ ಚರ್ಚುಗಳು ಯಾವುವು?
39. ಲೇಖಕರು ಪ್ರೆಸ್ಸಿನಲ್ಲಿ ಕೆಲಸಕ್ಕೆ ಸೇರಲು ಕಾರಣವೇನು?
40. ಅಯ್ಯಾಳಪ್ಪ ನವದಂಪತಿಗಳಿಗೆ ಏನೆಂದು ಆಶೀರ್ವದಿಸಿದನು?

**X. ಕೆಳಗಿನವುಗಳಲ್ಲಿ ಎರಡು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **3x2 = 6**

41. 'ಅಲ್ಲಲ್ಲಿ ಶಿಲೆಯದೇ ಮಂಚಗಳಿವೆ.'

42. ‘ನಾನೇ ಫ್ಯಾನ್ ನಂತೆ ಕಾಣುತ್ತಿದ್ದೆ.’

43. ‘ಕುಬುಸ ತೊಟ್ಕಂಡು ಅದ್ಯಾವ ನರಕಕ್ಕೋಗ್ಲಿ?’

**XI. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ** **4x2 = 8**

44. ಧೂರ್ತರು ವಂಚನೆಗೆ ಬಳಸಿದ ಉಪಾಯ ಮತ್ತು ಅದರ ಪರಿಣಾಮವನ್ನು ಕುರಿತು ಬರೆಯಿರಿ.

45. ಜನರು ಪುರುಷ ಪ್ರಯತ್ನಗಳನ್ನು ಯಾವಾಗ ಕೈಬಿಡುತ್ತಾರೆ?

46. ತಿರುಮಲಾಂಬ ಅವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

47. ವಿಮಲಕ್ಕನ ದೋಸೆ ಕಾಯಕದ ದಿನಚರಿಯನ್ನು ವಿವರಿಸಿ.

## ಈ-ವಿಭಾಗ

### (ಭಾಷೆ, ಸಾಹಿತ್ಯ, ಸ್ವರೂಪ)

**XII. ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **2x2 = 4**

48. ಸಾಹಿತ್ಯ ರಚನೆಗೆ ಪ್ರೇರಣೆ ಯಾವುದು?

49. ಸಾಹಿತ್ಯ ರಚನೆಗೆ ಅಗತ್ಯವಾದ ಮೂರು ಅಂಶಗಳನ್ನು ಬರೆಯಿರಿ.

50. ‘ವಚನ ಸಾಹಿತ್ಯ’ದ ವಿಶೇಷತೆ ಏನು?

**XIII. ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ** **4x1 = 4**

51. ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ಬರೆಯಿರಿ.

52. ಸಾಹಿತ್ಯದ ಪ್ರಯೋಜನವನ್ನು ವಿವರಿಸಿ.

## ಉ-ವಿಭಾಗ

### (ರಚನೆ)

**XIV. ಕೆಳಗಿನ ಪಠ್ಯಭಾಗವನ್ನು ಗಮನಿಸಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ** **1x5 = 5**

ಮಾತೃದೇವತಾ ಪಂಥದ ಜನಪದ ರೂಪಗಳೇ ಗ್ರಾಮದೇವತೆಗಳು. ಗ್ರಾಮದೇವತೆಗಳು ಗ್ರಾಮೀಣರ ಮಾನಸಿಕ ಅಗತ್ಯವೆನ್ನಬಹುದು. ದೇವತೆಯಿಲ್ಲದೆ ಅವರು ಯಾವುದನ್ನೂ ಆರಂಭಿಸುವುದಿಲ್ಲ. ಬೆಳಗಿನಿಂದ ಸಂಜೆಯ ತನಕದ ದುಡಿಮೆಯಲ್ಲಿ, ಇನ್ನಿತರ ಸಮಯದಲ್ಲಿ ದೇವರ ಆಸರೆ ಅವರಿಗೆ ಬೇಕು. ಅವರ ಎಲ್ಲಾ ಚಿಂತನೆಗಳು, ಕ್ರಿಯೆಗಳು, ಆಣೆ ಪ್ರಮಾಣಗಳೂ ದೇವತೆಯ ಸಾಕ್ಷಿಯಲ್ಲಿ ಸಾಗುತ್ತವೆ. ಇಡೀ ಗ್ರಾಮದ ಐಕ್ಯತೆ, ಸಾಮರಸ್ಯದ ಜೀವಾಳ ಈ ಗ್ರಾಮದೇವತೆಯೇ ಆಗಿರುತ್ತದೆ. ಗ್ರಾಮೀಣರು ತಮ್ಮ ಜೀವನದ ಅನುಭವದಿಂದಲೇ ಹುಟ್ಟಿದ್ದ ಪುರಾಣ ಕಥೆಗಳನ್ನು ಅವುಗಳಿಗೆ ಜೋಡಿಸಿದರು. ಅನೇಕ ಗ್ರಾಮದೇವತೆಗಳು ಅತಿ ಪ್ರಾಚೀನವಾದ ಭೂಮಿಪೂಜೆ ಅಥವಾ ಮಾತೃಪೂಜೆಯ ಕುರುಹುಗಳಲ್ಲದೆ ಬೇರೆಯಲ್ಲ. ಚಾರಿತ್ರಿಕ ವ್ಯಕ್ತಿಗಳು ಮತ್ತು ಮಹಾಸತಿಯರಾದ ಹೆಣ್ಣುಮಕ್ಕಳು ಮೃತರಾದ ನಂತರ ಗ್ರಾಮದೇವತೆಯರು ಎನಿಸಿಕೊಳ್ಳಬಹುದು.

53. ಗ್ರಾಮೀಣ ಜನರ ಮಾನಸಿಕ ಅಗತ್ಯ ಯಾವುದು?

54. ದೇವತೆಗಳ ಸಾಕ್ಷಿ ಯಾವುಯಾವುದಕ್ಕೆ ಬೇಕು?

55. ಗ್ರಾಮೀಣರು ಯಾವ ಕಥೆಗಳನ್ನು ಗ್ರಾಮದೇವತೆಗಳಿಗೆ ಜೋಡಿಸಿದರು?

56. ಗ್ರಾಮದೇವತೆಗಳು ಯಾವುದರ ಕುರುಹುಗಳು?

57. ಯಾರು ಯಾರು ಸತ್ತ ನಂತರ ಗ್ರಾಮದೇವತೆಗಳು ಎನಿಸಿಕೊಳ್ಳುತ್ತಾರೆ?

*-*-*-*-*

# ಪ್ರಥಮ ಪಿಯುಸಿ ಐಚ್ಛಿಕ ಕನ್ನಡ (16) ಮಾದರಿ ಪ್ರಶ್ನೆಪತ್ರಿಕೆಯ ನೀಲಿನಕ್ಷೆ – 2023-24

| ಕ್ರ.ಸಂ | ಪಠ್ಯಗಳು | ಬೋಧನಾ ಅವಧಿ | ನಿಗದಿಪಡಿಸಿದ ಅಂಕಗಳು | ಜ್ಞಾನ | | | | ಗ್ರಹಿಕೆ | | | | ಅಭಿವ್ಯಕ್ತಿ | | | | ಕೌಶಲ್ಯ | | | |
|---|---|---|---|---|---|---|---|---|---|---|---|---|---|---|---|---|---|---|---|
| | | | | 1 | 2 | 3 | 4 | 1 | 2 | 3 | 4 | 1 | 2 | 3 | 4 | 1 | 2 | 3 | 4 |
| 01 | ವಚನ | 16 | 13 | | 01 | | | | | 01 | | | | | 01 | | | | 01 |
| 02 | ಕೀರ್ತನೆ | 12 | 09 | | 01 | | | | | 01 | | | | | 01 | | | | |
| 03 | ಜಾನಪದ ಮತ್ತು ತತ್ವಪದ | 11 | 09 | | 01 | | | | | 01 | | | | | 01 | | | | |
| 04 | ಹೊಸಗನ್ನಡ ಕಾವ್ಯ | 30 | 25 | 05 | 03 | | | | | 02 | | | | | 01 | | | | 01 |
| 05 | ಗದ್ಯ | 28 | 36 | 05 | 03 | | | | | 03 | | | | | 04 | | | | |
| 06 | ಕನ್ನಡ ಭಾಷೆ ಮತ್ತು ಸಾಹಿತ್ಯ | 12 | 14 | | 03 | | | | | | | | | | 02 | | | | |
| 07 | ಭಾಷಾಭ್ಯಾಸ | 08 | 10 | 10 | | | | | | | | | | | | | | | |
| 08 | ರಚನೆ | 03 | 05 | | | | | 05 | | | | | | | | | | | |
| ಒಟ್ಟು ಪ್ರಶ್ನೆಗಳು | | 120 | 121 | 20 | 12 | | | 05 | | 08 | | | | | 10 | | | | 02 |
| ಒಟ್ಟು ಅಂಕಗಳು | | | | 20 | 24 | | | 05 | | 24 | | | | | 40 | | | | 08 |
| ಉತ್ತರಿಸಬೇಕಾದ ಅಂಕಗಳು | | | | 20 | 16 | | | 05 | | 15 | | | | | 20 | | | | 04 |
| ಹೆಚ್ಚುವರಿ ಅಂಕಗಳು | | | | - | 08 | | | - | | 09 | | | | | 20 | | | | 04 |

| | |
|---|---|
| **ಒಟ್ಟು ಪ್ರಶ್ನೆಗಳು** | **57** |
| **ಉತ್ತರಿಸಬೇಕಾದ ಪ್ರಶ್ನೆಗಳು** | **44** |
| **ಹೆಚ್ಚುವರಿ ಪ್ರಶ್ನೆಗಳು** | **13** |
| **ಒಟ್ಟು ಅಂಕಗಳು** | **121** |
| **ಉತ್ತರಿಸಬೇಕಾದ ಅಂಕಗಳು** | **80** |
| **ಹೆಚ್ಚುವರಿ ಅಂಕಗಳು** | **41** |